# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1309

ಸದಸ್ಯರ ಹೆಸರು : ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 18-03-2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಕ್ರಮ-ಸಕ್ರಮಕ್ಕಾಗಿ ಬಗರ್‌ಹುಕುಂ ಸಮಿತಿಗಳನ್ನು ರಚನೆ ಮಾಡಲಾಗಿದೆಯೇ; ಹಾಗಿದ್ದಲ್ಲಿ, ವಿವರ ನೀಡುವುದು; | ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94-ಎ ರಡಿಯಲ್ಲಿ ವಿಧಾನಸಭಾ ಕ್ಷೇತ್ರವಾರು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ರಚಿಸಲು ಅವಕಾಶ ಕಲ್ಪಿಸಲಾಗಿದೆ.<br><br>ರಾಜ್ಯದಲ್ಲಿನ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಬೆಂಗಳೂರು ನಗರ ವ್ಯಾಪ್ತಿಯ 27 ವಿಧಾನಸಭಾ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದಂತೆ 55 ವಿಧಾನಸಭಾ ಕ್ಷೇತ್ರಗಳಲ್ಲಿ ಬಗರ್‌ಹುಕುಂ ಸಮಿತಿಗಳನ್ನು ರಚಿಸಲಾಗಿದೆ. |
| ಆ) | ಅಕ್ರಮ-ಸಕ್ರಮಕ್ಕಾಗಿ ಬಗರ್‌ಹುಕುಂ ಸಮಿತಿ ಅಸ್ತಿತ್ವಕ್ಕೆ ತರುವ ಯೋಜನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ನ್ಯಾಯಾಲಯ ಸರ್ಕಾರಕ್ಕೆ ಪದೇ ಪದೇ ಎಚ್ಚರಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; (ವಿವರ ನೀಡುವುದು) | ಬಂದಿದೆ.<br><br>ಈ ಬಗ್ಗೆ ದಿನಾಂಕ: 12/02/2020ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. |
| ಇ) | ಅಕ್ರಮ-ಸಕ್ರಮಕ್ಕಾಗಿ ಬಗರ್‌ಹುಕುಂ ಸಮಿತಿ ರಚನೆಯಾದರೆ ಎಷ್ಟು ರೈತರಿಗೆ ಅನುಕೂಲವಾಗುತ್ತದೆ ಹಾಗೂ ಫಾರಂ ನಂ.57ರ ಅಡಿ ಅರ್ಜಿ ಸಲ್ಲಿಸಲು ಇರುವ ಮಾನದಂಡವೇನು? (ವಿವರ ನೀಡುವುದು) | ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 108(ಎಫ್) ರಂತೆ ಮಂಜೂರಾತಿಯನ್ನು ಪಡೆಯಲು ಈ ಕೆಳಕಂಡ ಅರ್ಹತೆಯನ್ನು ಹೊಂದಿರಬೇಕು.<br>• ಅವನು 18 ವರ್ಷ ವಯಸ್ಸು ದಾಟಿರಬೇಕು.<br>• ಆ ಜಮೀನು ಸ್ಥಿತವಾಗಿರುವ ತಾಲ್ಲೂಕಿನ ಮಿತಿಗಳೊಳಗೆ ಅಥವಾ ಪಕ್ಕದ ತಾಲ್ಲೂಕಿನೊಳಗೆ ಅವನು ಖಾಯಂ ನಿವಾಸಿಯಾಗಿರಬೇಕು.<br>• ಅವನು ವೈಯಕ್ತಿಕವಾಗಿ ಜಮೀನು ಬೇಸಾಯ ಮಾಡುತ್ತಿರುವ ಒಬ್ಬ ಸದ್ಭಾವಿಕ ಬೇಸಾಯಗಾರನಾಗಿರದ ಹೊರತು ಮತ್ತು ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ರ ಉಪಬಂಧಗಳ ಮೇರೆಗೆ ಜಮೀನನ್ನು ಹೊಂದುವುದರಿಂದ ಅಥವಾ ಪಡೆಯುವುದರಿಂದ ನಿಷೇಧಿಸಲ್ಪಟ್ಟಿರಬೇಕು. |

| | | |
|---|---|---|
| | | • ಅವನು 01/01/2005ಕ್ಕೆ ಪೂರ್ವದಲ್ಲಿ ಕನಿಷ್ಠ ಮೂರು ವರ್ಷಗಳಿಗೆ ಕಡಿಮೆಯಾಗಿರದ ಒಂದು ನಿರಂತವಾದ ಅವಧಿಗಾಗಿ ಆ ಜಮೀನಿನ ಅಧಿಕೃತ ಅಧಿಭೋಗದಾರನಾಗಿರದ ಹೊರತು ಸದರಿ ಅಧ್ಯಾಯದ ಮೇರೆಗೆ ಭೂ ಮಂಜೂರಾತಿ ಪಡೆಯಲು ಅರ್ಹನಾಗ ತಕ್ಕುದಲ್ಲ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಾಗಿರುವ ವ್ಯಕ್ತಿಗಳ ಪ್ರಕರಣದಲ್ಲಿ, ಅಂಥ ಅವಧಿಯು ಒಂದು ವರ್ಷಕ್ಕಿಂತ ಕಡಿಮೆಯಾಗಿರ ತಕ್ಕುದಲ್ಲ.<br>• ಮಂಜೂರಿದಾರನು ತನ್ನ ಹಿಡುವಳಿ ಮತ್ತು ಮಂಜೂರಿ ಜಮೀನು ಸೇರಿ 4–38 ಎ/ಗುಂಟೆ ಒಳಗಡೆ ಇರತಕ್ಕದ್ದು.<br>• ಬೆಂಗಳೂರು ಮಹಾನಗರ ಪಾಲಿಕೆಯಿಂದ 18 ಕಿ.ಮೀ., ನಗರಸಭೆ ಯಿಂದ 10 ಕಿ.ಮೀ., ಪುರಸಭೆಯಿಂದ 5 ಕಿ.ಮೀ., ವ್ಯಾಪ್ತಿಯಿಂದ ಮೀರಬೇಕು.<br>• ಅವನು ವೈಯಕ್ತಿಕವಾಗಿ ಜಮೀನು ಬೇಸಾಯ ಮಾಡುತ್ತಿರುವ ಒಬ್ಬ ಸದ್ಭಾವಿಕ ಬೇಸಾಯಗಾರನಾಗಿರದ ಹೊರತು ಮತ್ತು ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ರ ಉಪಬಂಧಗಳ ಮೇರೆಗೆ ಜಮೀನನ್ನು ಹೊಂದುವುದರಿಂದ ಅಥವಾ ಪಡೆಯುವುದರಿಂದ ನಿಷೇಧಿಸಲ್ಪಟ್ಟಿರಬೇಕು.<br>• ನಮೂನೆ–50 ಮತ್ತು ನಮೂನೆ–53ರಡಿ ಅರ್ಜಿ ಸಲ್ಲಿಸಿದವರು ನಮೂನೆ–57ರ ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ. |

**ಸಂಖ್ಯೆ: ಆರ್‌ಡಿ 58 ಎಲ್‌ಜಿಕ್ಯೂ 2020**

(ಆರ್.ಅಶೋಕ)
ಕಂದಾಯ ಸಚಿವರು